# ಕೋಟ್ಯಧಿಪತಿ ಕಷ್ಟ–ಸುಖ!

‘ಕನ್ನಡದ ಕೋಟ್ಯಧಿಪತಿ’ ಕಾರ್ಯಕ್ರಮದ ನಾಲ್ಕನೇ ಸೀಸನ್ ಕಲರ್ಸ್ ಕನ್ನಡದಲ್ಲಿ ಜೂನ್ 22ರಿಂದ ಆರಂಭವಾಗಿದೆ. 40 ಎಪಿಸೋಡ್‌ಗಳ ಈ ಸೀಸನ್ ಪ್ರತಿ ಶನಿವಾರ ಮತ್ತು ಭಾನುವಾರ ರಾತ್ರಿ 8 ಗಂಟೆಗೆ ಪ್ರಸಾರವಾಗಲಿದೆ. ಕೋಟಿ ಗೆಲ್ಲುವ ಅದೃಷ್ಟಶಾಲಿ ಯಾರು ಎಂಬ ಕುತೂಹಲ ಒಂದು ಕಡೆಗಾದರೆ ಈ ಸೀಸನ್‌ನನ್ನು ಪುನೀತ್ ನಡೆಸಿಕೊಡುವುದನ್ನು ನೋಡುವುದೇ ಸಂಭ್ರಮ. ಸಾಲು ಸಾಲು ಸಿನಿಮಾಗಳು, ನಿರ್ಮಾಣದ ಕೆಲಸಗಳ ನಡುವೆಯೂ ಪುನೀತ್‌ಗೆ ‘ಕೋಟ್ಯಧಿಪತಿ’ ಕಾರ್ಯಕ್ರಮ ನಡೆಸಿಕೊಡುವುದು ಹೆಚ್ಚು ತೃಪ್ತಿಕೊಡುತ್ತದಂತೆ. ಈ ಕಾರ್ಯಕ್ರಮದ ಜೊತೆಗೆ ತಮ್ಮ ಸಿನಿಮಾಗಳ ಕೆಲಸಗಳ ಕುರಿತೂ ಅವರು ‘ಸುಧಾ’ ಜೊತೆಗೆ ಮಾತನಾಡಿದ್ದಾರೆ.

■ ಪದ್ಮನಾಭ ಭಟ್



◆ **ಮತ್ತೆ ‘ಕೋಟ್ಯಧಿಪತಿ’ ಹೋಸ್ಟ್ ಸೀಟ್‌ನಲ್ಲಿ ಕೂತಿದ್ದೀರಿ. ಹೇಗನಿಸುತ್ತಿದೆ?**

‘ಕನ್ನಡದ ಕೋಟ್ಯಧಿಪತಿ’ ಕಾರ್ಯಕ್ರಮದೊಂದಿಗೆ ನನ್ನ ಪ್ರಯಾಣ ಶುರುವಾಗಿದ್ದು 2011ರಲ್ಲಿ. ಈ ಶೋ ನಡೆಸಿಕೊಡಲು ಆಫರ್ ಬಂದಾಗ ಮೊದಲು ನನಗೆ ನೆನಪಿಗೆ ಬಂದಿದ್ದು ನನ್ನ ತಂದೆ ರಾಜ್‌ಕುಮಾರ್. ಯಾಕಂದ್ರೆ ಅವರಿಗೆ ‘ಕೌನ್ ಬನೇಗಾ ಕರೋಡ್‌ಪತಿ’ ಕಾರ್ಯಕ್ರಮ ಅಂದ್ರೆ ಅಷ್ಟು ಇಷ್ಟವಾಗಿತ್ತು. ಅವರು ಹಿಂದಿಯ ಕರೋಡ್‌ಪತಿಯ ಎಲ್ಲ ಸೀಸನ್‌ಗಳನ್ನೂ ನೋಡುತ್ತಿದ್ದರು. ಅವರೊಟ್ಟಿಗೆ ನಾನೂ ನೋಡುತ್ತಿದ್ದೆ. ಆ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದವರು ನನ್ನ ತುಂಬ ಮೆಚ್ಚಿನ ನಟ ಅಮಿತಾಭ್ ಬಚ್ಚನ್. ಅವರನ್ನು ಭೇಟಿ ಮಾಡಲು ಅವಕಾಶ ಸಿಗುತ್ತದಲ್ಲಾ ಎಂಬ ಖುಷಿ, ಕಾರ್ಯಕ್ರಮವನ್ನು ಹೇಗೆ ನಡೆಸಿಕೊಡುವೆನೋ ಎಂಬ ಆತಂಕ ಎರಡೂ ನನ್ನಲ್ಲಿ ಇತ್ತು. ನಾನು ಶೋ ಮಾಡೋಕೆ ಹೋಗುವಾಗ ಅಮ್ಮ, ‘ಹೋಗೋ, ನೀನು ಚಚ್ಚಾಕೊಂಡು ಬರ್ತೀಯಾ’ ಎಂದು ಹೇಳಿದ್ದರು. ಅವರ ಮಾತು ನನ್ನಲ್ಲಿ ಆತ್ಮವಿಶ್ವಾಸ ಹುಟ್ಟಿಸಿತ್ತು. ಅಲ್ಲದೆ ನನ್ನ ಅಣ್ಣಂದಿರು, ಮನೆಯವರ ಬೆಂಬಲ ಕೂಡ ಈಗಲೂ ಇದೆ.

ಮೊದಲ ಎರಡು ವರ್ಷ ನಾನು ‘ಕೋಟ್ಯಧಿಪತಿ’ ನಡೆಸಿದೆ. ಈಗ ಮತ್ತೆ ಆ ಕಾರ್ಯಕ್ರಮ ನಡೆಸಲು ಅವಕಾಶ ಸಿಕ್ಕಿದೆ. ಇದಕ್ಕಾಗಿ ನನಗೆ ಹೆಮ್ಮೆ ಮತ್ತು ಸಂತೋಷ ಎರಡೂ ಇದೆ. ಬದುಕಿನಲ್ಲಿ ಏನೋ ಬದಲಾವಣೆ ಆಗಬಹುದು ಎಂಬ ನಂಬಿಕೆಯಲ್ಲಿ ಸ್ಪರ್ಧಿಗಳು ಈ ಸೀಟ್ ಮೇಲೆ ಬಂದು ಕೂಡುತ್ತಾರೆ. ಸರಸ್ವತಿಯ ಆಶೀರ್ವಾದದಿಂದ ಇಲ್ಲಿಗೆ ಬಂದು ಲಕ್ಷ್ಮಿಯನ್ನು ತೆಗೆದುಕೊಂಡು ಹೋಗುತ್ತಾರೆ. ಅವರ ಜೊತೆಗೆ ಕಾರ್ಯಕ್ರಮ ನಡೆಸಿಕೊಡುವುದು ನನಗೆ ತುಂಬ ತೃಪ್ತಿ ಕೊಡುವ ಕೆಲಸ. ಹಾಗಾಗಿ ‘ಕೋಟ್ಯಧಿಪತಿ’ ಪಾಲಿಗೆ ಯಾವಾಗಲೂ ಸ್ಪೆಷಲ್ ಶೋ.